## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 76/2020

ಸಾಕ್ಷಿಗೆ ದಿನಾಂಕ 16-11-2023 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 1

| | | |
|---|---|---|
| ಹೆಸರು | ಃ | ಲತಾ |
| ತಂದೆ/ಗಂಡನ ಹೆಸರು | ಃ | ನಾಮದೇವ್ ಎನ್ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಟೈಲರಿಂಗ್ |
| ವಾಸ ಸ್ಥಳ | ಃ | ಗೋವಿಂದಪುರ ತಾಂಡ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ-2 ಮತ್ತು 3 ನಮ್ಮ ಊರಿನವರು ಇರುತ್ತಾರೆ. ಚಾಸಾ-4 ಮತ್ತು 5 ನನ್ನ ತಂದೆ ತಾಯಿಯಾಗಬೇಕು. ಚಾಸಾ-6 ರಿಂದ 10 ನನ್ನ ಊರಿನವರು, ಚಾಸಾ-11 ನನ್ನ ಚಿಕ್ಕಪ್ಪನಾಗಬೇಕು, ಚಾಸಾ-12, 14, 15 ನನ್ನ ಮಾವಂದಿರಾಗಬೇಕು, ಚಾಸಾ-13 ನನ್ನ ತಮ್ಮನಾಗಬೇಕು. ಚಾಸಾ-16 ನನ್ನ ಅಜ್ಜನಾಗಬೇಕು.

1 ನೇ ಆರೋಪಿ ನನ್ನ ಗಂಡನಾಗಬೇಕು, 4 ನೇ ಆರೋಪಿ ಮೈದುನನಾಗಬೇಕು, 2 ಮತ್ತು 3 ನೇ ಆರೋಪಿತರು ನನ್ನ ಅತ್ತೆ ಮಾವಂದಿರಾಗಬೇಕು.

ಭಾನುವಾರ ಮೇ 10 ರ 2015 ರಂದು ನನ್ನ ಮನೆಯ ಮುಂದೆ ನನ್ನ ಮತ್ತು 1 ನೇ ಆರೋಪಿತನ ನಡುವೆ ಗುರುಹಿರಿಯರ ಸಮಕ್ಷಮ ಮದುವೆಯಾಗಿದ್ದು, ಮದುವೆ ಸಮಯದಲ್ಲಿ 5 ತೊಲೆ ಬಂಗಾರ, 30 ತೊಲೆ ಬೆಳ್ಳಿಯ ಕಡಗ, ರೂ.50 ಸಾವಿರ ನಗದು ಹಣವನ್ನು ಕೊಟ್ಟಿದ್ದು, ರೂ.5 ಲಕ್ಷಗಳನ್ನು ಬೇರೆಯವರಿಂದ ಸಾಲ ತೆಗೆದು ನಮ್ಮ ತಂದೆ ತಾಯಿಯರು ನಮ್ಮ ಮದುವೆ ಮಾಡಿಕೊಟ್ಟಿರುತ್ತಾರೆ. ಮದುವೆಯಾದ ನಂತರ ನಾನು ನನ್ನ ಗಂಡನ ಮನೆ ಕೋಗಳಿ ತಾಂಡಕ್ಕೆ ಹೋಗಿರುತ್ತೇನೆ. ಆ ಸಮಯಲ್ಲಿ ಒಟ್ಟು 5 ಜನರಿದ್ದು, ನನ್ನನ್ನು ಸೇರಿ ಒಟ್ಟು 7 ಜನ ಒಂದೇ ಮನೆಯಲ್ಲಿ ವಾಸವಾಗಿದ್ದೆವು. ಮದುವೆಯಾದ 1-2 ವರ್ಷಗಳ

ಕಾಲ ನನ್ನ ಗಂಡ ಚೆನ್ನಾಗಿ ನೋಡಿಕೊಂಡಿದ್ದು, ನನ್ನ ಗಂಡನು ಬೇರೊಂದು ಮದುವೆಯಾಗಿ ನನಗೆ ರೂ.2 ಲಕ್ಷ ನಗದು ಹಣ ತೆಗೆದುಕೊಂಡು ಬಾ ಅಥವಾ ಟ್ರಾಕ್ಟರ್ ಅಥವಾ ಟೆಂಪೋವನ್ನಾದರೂ ತೆಗೆದುಕೊಂಡು ಬಾ ಎಂದು ಮಾನಸಿಕವಾಗಿ ಹಿಂಸಿಸುತ್ತಿದ್ದು, ನನ್ನ ಗಂಡನು ನನಗೆ ಕಿರುಕುಳವನ್ನು ಕೊಟ್ಟ ಕಾರಣ 4-4 ತಿಂಗಳಿಗೆ ನನಗೆ ಎರಡು ಬಾರಿ ಗರ್ಭಪಾತವಾಗಿರುತ್ತದೆ. ನಾನು ಕಪ್ಪಗಿದ್ದು ನನಗೆ ಹುಟ್ಟುವ ಮಗು ಕೂಡಾ ಕಪ್ಪಾಗಿರುತ್ತದೆಂದು ನನ್ನನ್ನು ಹಿಯಾಳಿಸಿ ಬೈಯುತ್ತಿದ್ದರು. ನನಗೆ ನನ್ನ ಗಂಡನ ಮನೆಯವರು ಕಿರುಕುಳವನ್ನು ಕೊಟ್ಟ ಕಾರಣ ನಾನು ಮಾನಸಿಕ ಖಿನ್ನತೆಗೆ ಒಳಗಾಗಿದ್ಧು ನನ್ನ ಗಂಡನ ಮನೆಯವರು ಎಲ್ಲಿಯೂ ನನಗೆ ಚಿಕಿತ್ಸೆಯನ್ನು ಕೊಡಿಸಿರುವುದಿಲ್ಲ. ನನ್ನ ಗಂಡನ ಮನೆಯವರು ಬಲವಂತವಾಗಿ ನನ್ನನ್ನು ನನ್ನ ತಂದೆ ತಾಯಿಯ ಮನೆಗೆ ಕಳುಹಿಸಿದ್ದು, ನನಗೆ ಹೋಗಲು ಇಷ್ಟವಿಲ್ಲದಿದ್ದರೂ ಬಿಟ್ಟು ಬಂದಿರುತ್ತಾರೆ, ನಾನು ನನ್ನ ಗಂಡನ ಮನೆಯಲ್ಲಿ ಕೂಲಿ ಕೆಲಸ ಮಾಡಿಕೊಂಡು ಇರುತ್ತೇನೆಂದರೂ ಕೇಳಲಿಲ್ಲ.

ನನ್ನ ಗಂಡನ ಮನೆಯವರು ನನ್ನ ಗಂಡನ ಎರಡನೇ ಹೆಂಡತಿಯನ್ನು ನಾನೇ ಕರೆದುಕೊಂಡು ಬರುವಂತೆ ನನಗೆ ಹೇಳಿದ್ದು ಅದಕ್ಕೆ ನಾನು ನನ್ನ ಹೆಸರಿಗೆ ಹೊಲ, ಮನೆಯನ್ನು ಬರೆದುಕೊಟ್ಟಲ್ಲಿ ಅವಳನ್ನು ಕರೆದುಕೊಂಡು ಬರುವುದಾಗಿ ಹೇಳಿರುತ್ತೇನೆ. ಆಕೆಯ ಹೆಸರು ಶ್ವೇತಾ, ಆಕೆಯ ತಂದೆಯ ಹೆಸರು ಕೃಷ್ಣಾನಾಯ್ಕ ಇದ್ದು ಅವರು ದಾಸರಹಳ್ಳಿ ತಾಂಡದವರಾಗಿರುತ್ತಾರೆ. ನನ್ನ ಮದುವೆಯಾದ 2 ವರೆ ವರ್ಷಗಳ ನನ್ನ ಗಂಡನು ಆಕೆಯನ್ನು ದೇವಸ್ಥಾನದಲ್ಲಿ ಮದುವೆಯಾಗಿರುತ್ತಾರೆ. ನನ್ನ ಗಂಡನು ನಾನು ಹೋಗದಿದ್ದರೇ ಆತನು ಸಾಯುವುದಾಗಿ ಎಣೆಯನ್ನು ಆತನ ಮೈಮೇಲೆ ಹಾಕಿಕೊಂಡಿರುತ್ತಾನೆ. ನನಗೆ ನನ್ನ ಗಂಡನು ಪ್ರತಿದಿನವೂ ಬಹಳ ಹಿಂಸೆಯನ್ನು ಕೊಡುತ್ತಿದ್ದನು. ನನಗೆ ಇಷ್ಟವಿಲ್ಲದಿದ್ದರೂ ನನ್ನನ್ನು ಬಲವಂತವಾಗಿ ನನ್ನ ಗಂಡನ ಮನೆಯವರು ನನ್ನ ತವರುಮನೆಗೆ ಕಳುಹಿಸಿರುತ್ತಾರೆ. ನಾವು ಇಟಗಿ ಪೊಲೀಸ್ ಠಾಣೆಗೆ ಆರೋಪಿತರ ವಿರುದ್ಧ ದೂರನ್ನು ಕೊಡಲು ಹೋಗಿದ್ದು, ನನ್ನ

ಗಂಡನ ಮನೆಯವರು ನಾನು ಹುಚ್ಚಿ ಎಂದು ಹೇಳಿದ್ದ ಕಾರಣ ಇಟಿಗಿ ಪೊಲೀಸ್ ಠಾಣಾ ಪೋಲೀಸರು ನಮ್ಮ ದೂರನ್ನು ತೆಗೆದುಕೊಂಡಿರುವುದಿಲ್ಲ. ಆ ನಂತರ ನಾನು ನನ್ನ ವಕೀಲರ ಬಳಿ ಹೋಗಿ ನಡೆದ ವಿಷಯ ಹೇಳಿರುತ್ತೇನೆ. ಆ ನಂತರ ನ್ಯಾಯಾಲಯಕ್ಕೆ ಬಂದು ನಾನು ಆರೋಪಿತರ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ.

ಆ ನಂತರ ಪೋಲೀಸರು ನನ್ನ ಗಂಡನ ಮನೆಯ ಹತ್ತಿರ ಪೋಲೀಸರು ಬಂದು ತನಿಖೆಯನ್ನು ಮಾಡಿರುತ್ತಾರೆ. ಘಟನಾ ಸ್ಥಳದಲ್ಲಿ ಪೋಟೋಗಳನ್ನು ತೆಗೆಯಲಾಯಿತು.

ಸಾಕ್ಷಿಯು ಖಾಸಗೀ ದೂರು, ಪಂಚನಾಮೆ ಹಾಗೂ ನಕಾಶೆಗಳಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ 1 ರಿಂದ 3 ಎಂದು ಹಾಗೂ ಸಹಿಗಳನ್ನು ನಿಪಿ-1ಎ ರಿಂದ 3ಎ ಎಂದು, 2 ಪೋಟೋಗಳನ್ನು ನಿಪಿ-4 ಮತ್ತು 5 ಎಂದು, ಮದುವೆಯ ಆಹ್ವಾನ ಪತ್ರಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿದ್ದು ಪಾಟೀಸವಾಲಿಗೆ ಅನುಮತಿಯನ್ನು ಕೇಳಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-</u>

ನನಗೆ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, ಕೊಲೆಬೆದರಿಕೆಯನ್ನು ಹಾಕಿರುತ್ತಾರೆಂದರೆ ಸರಿ. .

(ಆರೋಪಿತರ ಪರ ವಕೀಲರ ಕೋರಿಕೆ ಪಾಟೀಸವಾಲನ್ನು ಮುಂದೂಡಲಾಯಿತು..)
(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ